(10) 2

Regd No B C. 155

48 th Year
ನೇ ವರ್ಷ
☆
Sri 'Satyavadi
— DAILY —
MYSORE

ಸತ್ಯವಾದಿ

ಸ್ಥಾಪಕರು:- ಅಂಬಾಸೆ ಪಂಪೈಬಾರ್ ಎಂ ಪಿ ಸುಬ್ಬರಾಯರು 2ನೆ]

3n

15—1—1965

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಸತ್ಯವಾದಿ ಪತ್ರಿಕೆಯನ್ನು ತಪ್ಪದೇ ಓದಿ
ದಿನ ಪತ್ರಿಕೆ ತಿಂಗಳಿಗೆ 40 ನ ಪೈ

P.otect the Cow
ಗೋಸಂರಕ್ಷಣೆ ಮಾಡಿ

ಮಹಿಳೆಯ ಸಾಹಸ!

ನ್ಯೂಯಾರ್ಕಿನ ಫ್ಯಾಷನಬಲ್ ಅಭರಣ ಅಂಗಡಿಗೆ ಮಹಿಳಾ ಕಳ್ಳಿಯೊಬ್ಬಳು ಹೋಗಿ, ತಾನು ಬೇರೆ ಕಡೆ ಕದ್ದಿದ್ದ 7500 ಡಾಲರು ಬೆಲೆಯ ಉಂಗುರವನ್ನು ಅಲ್ಲಿಟ್ಟು ಅಲ್ಲಿದ್ದ 19500 ಡಾಲರು ಬೆಲೆಯ ವಜ್ರದ ಉಂಗುರವನ್ನು ಅಪಹರಿಸಿ ಹೊಂಟುಹೋದಳು ; ನಂತರ ಮತ್ತೊಂದು ಅಂಗಡಿಗೆ ಹೋಗಿ ಈ ಉಂಗುರವನ್ನು ಅಲ್ಲಿಟ್ಟು ಅಲ್ಲಿದ್ದ 38500 ಡಾಲರು ಬೆಲೆಯ ಉಂಗುರವನ್ನು ಹೊಡೆದುಕೊಂಡು ಹೋದಳು !

★

ಶ್ರೀ ಮುಸಾನಿಯವರು ಕೇಂದ್ರ ಅರ್ಥಸಚಿವರಾಗಿದ್ದಿದ್ದರೆ

ಶ್ರೀ ಮುಸಾನಿ ಕೇಂದ್ರದ ಅರ್ಥ ಸಚಿವರಾಗಿದ್ದರೆ, ಹೀಗೆ ಮಾಡುತ್ತಿದ್ದರಂತೆ! ತಿ ನೇ ಯೋಜನೆಯನ್ನು ಇನ್ನೂ 2 ವರ್ಷ ಹೆಚ್ಚಿಸಿ, ಎಲ್ಲ ಹತೋಟಗಳನ್ನೂ ತೆಗೆದುಹಾಕಿ, ಹೆಚ್ಚು ಉತ್ಪಾದನೆಗೆ ಅವಕಾಶ ಕಲ್ಪಿಸಲಾಗುತ್ತೆ : ಜೊತೆಗೆ ವಿದೇಶೀ ಬಂಡವಾಳ ಹೆಚ್ಚೆಚ್ಚಾಗಿ ದೊರೆಯುತ್ತೆ: ಆಗ ಬೆಲೆಗಳು ತಾವೇ ಒಂದು ಎಗ್ಗಕ್ಕೆ ಬರುತ್ತವೆ : ಚಲಾವಣೆಯಲ್ಲಿರುವ ಹಣಕ್ಕೆ ಸರಿಬರುತ್ತೆ ' ವ್ಯಾವಹಾರಿಕ ರೂಪಾಯಿ ' ಇರುವುದು; ಖಾಸಗಿ ಕ್ಷೇತ್ರಗಳಿಂದ ಪರಮಾಣು ಸೇರಿ ಎಲ್ಲ ಕ್ಷೇತ್ರಗಳಲ್ಲಿಯೂ ಪ್ರಗತಿಯಾಗುವುದಕ್ಕೂ ಅಗತ್ಯವಾಗಿರುವುದೆಂದು ಹೇಳುವರು : ಒಂದು ವರ್ಷ ಅಡಚಣೆಯ ಮಿರ್ಚನ್ನು ಹೆಚ್ಚಿಸುವುದಿಲ್ಲವೆಂತೆ

★

ಇಂದಿನ ಪಂಚಾಂಗ

ದೈವಜ್ಞಶಿರೋಮಣಿ
ಅಷ್ಟಾವಧಾನ ಮಹಾವಿದ್ವಾನ್ ಧರ್ಮಾಧಿಕಾರಿ
ರಾಜಜ್ಯೋತಿಷ್ಯಶಿಕ್ಷ, ಜ್ಯೋತಿರ್ವಿದ್ವನ್ಮಣಿ
ಸಂಪತ್ಕೃಷ್ಣ ಜೋಯಿಸರವರಿಂದ

16 ಶನಿವಾರ ಚತುರ್ಥಿ ಪರ್ವಾ

ವಾರ್ತಾ ವಿಶೇಷಗಳು

ನವದೆಹಲಿ— ಇಲ್ಲಿ ನಡೆಯುತ್ತಿರುವ ' ಅನಧಿಕೃತ ' ಕಾರ್ಮಿಸ್ಟಿಲ್ಸ್ ರಿಲೇಶನ್ಸ್ ಸಮ್ಮೇಳನದಲ್ಲಿ ಕಾರ್ಮಿಕ ಸಮಸ್ಯೆ ಪರಿಹಾರಕ್ಕೆ ವಿಧಿಸ್ತಕೆ ನಡೆಸಲು ಬ್ರಿಟನ್ನಿನ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ನೇಮಿಸಲು ನಿರ್ಧರಿಸಲಾಯಿತು.

★

ವಾಷಿಂಗ್ಟನ್— ಚೀನಾದ ಅಣುಶಕ್ತಿ ಸ್ಫೋಟದಿಂದ ಅಪಾಯವಿರುವುದೆಂದೂ, ಆಫ್ರಿಕಾ ಸ್ವತಂತ್ರ ದೇಶಗಳನ್ನು ಅಣು ಆಕ್ರಮಣದಿಂದ ರಕ್ಷಿಸಬೇಕೆಂದೂ ಜವಾನು ಪ್ರಧಾನಿ ಇಸಾಕು ಸಾಟೋ ಹೇಳಿದ್ದಾರೆ.

★

ಜಿನೀವಾ— ಬಿದಿಟ್ಟನ್ನು ಅಕ್ರಮಿಸಿರುವ ಚೀನಾದ ಅಧಿಕಾರಿಗಳು ಅಲ್ಲಿಯ ಸನ್ಯಾಸಿಗಳು ಮದುವೆಯಾಗಬೇಕೆಂತೆ ಒತ್ತಾಯ ಮಾಡುತ್ತಾ ಹಿಂಸಿಸುತ್ತಿರುವರೆಂದು ವರದಿಯಾಗಿದೆ

★

ನವದೆಹಲಿ — ಭಾರತದ ಇಂಡಸ್ಟ್ರಿಯಲ್ ಫೈನಾನ್ಸ್ ಗಾರ್ಪೊರೇಷನ್ನಿಗೆ ಅಮೇರಿಕಾ ಸಂಸ್ಥೆಯು 10 ಮಿಲಿಯ ಡಾಲರು ಸಾಲಕೊಡುವುದಾಗಿ ತಿಳಿಸಿದೆ

★

ಮಾಸ್ಕೋ— ಭಾರತ ಸರಕಾರ ವಾನು ಕವನ್ನಿಸಿದ್ದನ್ನು ದಸ್ತಗಿರಿ ಮಾಡುತ್ತಿರುವುದನ್ನು ಪ್ರತಿಭಟಿಸಿ ವ್ಯಾವಡಾ ಪತ್ರಿಕೆ ಪ್ರಕಟಿಸಿದೆ.

★

ಗಾಂಗಟೋಕ್— ಸಿಕ್ಕಿಂ-ಲಿಬೆಟ್ಟು ಗಡಿಯಲ್ಲಿ ಚೀನಾ ಸೈನ್ಯ ಶೇಖರಣೆ ಹೆಚ್ಚುತ್ತಿರುವುದಾಗಿ ವರದಿಯಾಗಿದೆ

★

ಕರಾಚಿ— ಇಲ್ಲಿ ವಿದ್ಯಾರ್ಥಿಗಳ ಅಶಾಂತಿತೆ ಹೆಚ್ಚುತ್ತಿರುವುದರಿಂದ ಇನ್ನೂ ಅನೇಕ ಶಾಲೆಗಳು ಮುಚ್ಚಲ್ಪಟ್ಟವು

ಬಫರು ಸ್ಟಾಕು

ಮೂವತ್ತು ಲಕ್ಷ ಟನ್ ಧಾನ್ಯವನ್ನು ಬಫರು ಸ್ಟಾಕು ಮಾಡುವುದಾಗಿ ಆಹಾರ ಮಂತ್ರಿ ಶ್ರೀ ಸಿ ಸುಬ್ರಹ್ಮಣ್ಯಂ ತಿಳಿಸಿದರು.

★

ಮೊಂಘೀರಿನಲ್ಲಿ ಆದ ಭೂಕಂಪದಿಂದ ಆದ ಅನಾಹುತಗಳಾದವು. ದೀಪಕ್ಕೆ ಎಣ್ಣೆ ಹಾಕುತ್ತಿದ್ದ ಒಬ್ಬ ಹೆಂಗಸು ದೀಪ ತನ್ನ ಬಟ್ಟೆ ಮೇಲೆ ಬಿದ್ದಕಾರಣ ಜಟ್ಟಿ ಹೊತ್ತಿಕೊಂಡು ಸುಟ್ಟುಹೋದಳು. ಅವಳನ್ನು ರಕ್ಷಿಸಲು ಹೋದ ಇಬ್ಬರು ಮಕ್ಕಳು ಬೆಂಕಿಯಿಂದ ತೀವ್ರಗಾಯಗೊಂಡರು ಎಂದೂ ಕಡೆ ಬೆಂಕಿ ಕಾಯಿಸಿಕೊಳ್ಳುತ್ತಿದ್ದ ಒಬ್ಬನು ಬೆಂಕಿಗೆ ಬಿದ್ದು ಸ್ವತನು

ಮುಂಬಡಂಡನೆ ವಜಾ ಮಾಡುವ ಕರಿತು ಪ್ರಶ್ನೋತ್ತರವನ್ನು ಸ್ವೀಕರಿಕಾಲವನ್ನು ಮಾರ್ಚ್ 31 ರ ವರೆಗೆ ಹೆಚ್ಚಿಸಲಾಗಿದೆ

ಪ್ರಧಾನಿ ಶಾಸ್ತ್ರಿಗಳು ರಾಜ್ಯಕ್ಕೆ 23 ರಿಂದ 3 ದಿನಗಳ ಭೇಟಿಕೊಡುವರು.

ಗೋವಾ ಮೈಸೂರಿಗೆ

ಗೋವಾವನ್ನು ಮೈಸೂರಿಗೆ ಸೇರ್ಪಡೆ ಮಾಡುವ ಅವಶ್ಯಕ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂಬ ತ್ತಾವನ್ನು ವಿಧಾನ ಪರಿಷತ್ತಿನಲ್ಲಿ ಹಾವನ ಹಳ್ಳಿರಾವ ಸ್ವಾಮಿಯವರು ತಂದಿರು

★

ಅಕ್ಕಿ ಸಂಗ್ರಹಣೆ ಆಜ್ಞೆಯನ್ನು 2 ವಾರಂಗಳು ತಡೆ ಮಾಡಿ ಮೈಸೂರು ಹೈಕೋರ್ಟು ಆದೇಶ ಜಾರಿ ಮಾಡಿದೆ.

ಒರಿಸ್ಸಾ ಮಂತ್ರಿಮಂಡಲವನ್ನು ವಜಾ ಮಾಡಿ ಅದರ ಬಗ್ಗೆ ವಿಚಾರಣೆ ನಡೆಸಲು ಮಂತ್ರಿ ಎಸ್ಸೆಸ್ಸೆ ಕಾರ್ಯದರ್ಶಿ ಭಾರತ ಅಧ್ಯಕ್ಷರಿಗೆ ಮನವಿ ಮಾಡಿಕೊಂಡರು

ಮೈಸೂರು ದೇಶದ ಮುಂಡ್ಯ ಜಿಲ್ಲೆಯಲ್ಲಿ ಹಲವಾರು ಹಾಗೂ ಎಮ್ಮೆಗಳು ಪರ್ವಕ್ಕೆ ನೂರು ದಿನಗಳ ಧತ್ತ ತಿನ್ನುವುದಾಗಿ ಅಹಾರ ಕಾರ್ಯೋದೇಶನಿಗೆ ಧಕ್ಷರಾದ ಶ್ರೀ ಟಿ ಎಸ್ಸೆ ವರದರಾಜನಲ್ಲಿ ತಿಳಿಸಿದರು.

ಉತ್ತರ ಪ್ರದೇಶದಲ್ಲಿ ಮಹಿಳೆಯರ ವಿದ್ಯಾಭ್ಯಾಸವು ಹಕ್ಕನೇ ತರಗತಿವರೆಗೆ ಉಚಿತ ಮಾಡಲಾಗಿದೆ

ಇದ್ಯಾವ ಸಮಾಜವಾದ !

ಪ್ರಜಾಸತ್ತಾತ್ಮಕ ಸಮಾಜವಾದದ ಘೋಷಣೆಯನ್ನು ಕಾಗ್ರೆಸ್ಸು ಪಕ್ಷ ಜನತೆಯು ಮುಂದಿಟ್ಟಿದೆ ; ಆದರೆ ಮಂತ್ರಿಮಂಡಲವು ಆ ಘೋಷಣೆಯನ್ನು ಕಾರ್ಯರೂಪಕ್ಕೆ ತರಲು ಅದಕೊಂದು ರೂಪು ಕೊಡಲು ಹವಣಿಸುತ್ತಿದೆ, ಓಲಾಡುತ್ತಿದೆ ಅದರೆ ಅದೆಲ್ಲಾ ಬಾಯಿಮಾತಿನಲ್ಲೇ ಸರಿ : ಅದಕ್ಕೊಂದು ನಿದರ್ಶನ ಇಲ್ಲಿದೆ.

ಕೇಂದ್ರ ಸರಕಾರದ ನೌಕರರ ಸಂಬಳವನ್ನು (ತುಟ್ಟಿಭತ್ಯೆಯಲ್ಲಿ) ಅಧಿಕಗೊಳಿಸಿರುವುದಾಗಿ ಕೇಂದ್ರ ಸರಕಾರ ಪ್ರಕಟಿಸಿರುತ್ತದೆ : ಅದಕ್ಕೆ ಉಪಯೋಗಿಸುತ್ತಿರುವ ಅಳತೆಕೋಲಾದರೂ ಯಾವುದು ? ನಾಲ್ಕನೇ ತರಗತಿಯ ಉದ್ಯೋಗಸ್ಥರಿಗೂ ಪ್ರಥಮ ದರ್ಜೆಯ ಅಧಿಕಾರಿಗೂ ಸಮಯ ನಿರುವುದು ಒಂದೇ ರೀತಿ ಇದೆ : ಈ ಅಳತೆಗೋಲನ್ನು ಉಪಯೋಗಿಸಿಕೊಂಡು ಸಮಾಜವಾದದ ಪ್ರಕಾರ ಎಲ್ಲರಿಗೂ ಒಂದೇ ರೀತಿ ತುಟ್ಟಿಭತ್ಯೆಯನ್ನು ನಿರ್ಧರಿಸಬೇಕಾಗಿತ್ತು : ಅಂದರೆ ಹಿಂದೆ ಒಂದು ರೂಪಾಯಿ ತುಟ್ಟಿಭತ್ಯೆಯಿದ್ದವನಿಗೆ ಘೋಷಿತ ವಿಧಾನದಪ್ರಕಾರ ಎಷ್ಟು ರೂಪಾಯಿ ಬರುವುದೆಂದು ಎಲ್ಲರಿಗೂ ತಿಳಿಯುವಂತೆ ಒಂದು ರೂಪಾಯಿ ಜಾಸ್ತಿ ಮಾಡಬೇಕಿತ್ತು : ಅಥವಾ ಎಲ್ಲರಿಗೂ ಸಮಾನ ಮೊಬಲಗನ್ನೇ ಕೊಡಬೆ

ಕಾರ್ಯಕ್ರಮ ; ಕೇಂದ್ರ ಸರಕಾರ ಹಾಗೆ ಮಾಡಿರುವುದಿಲ್ಲ : ಅದು ಎಳೂವರೆ ರೂಪಾಯಿ ದಿಢೀರೆಂದು ಅರುವತ್ತೊಂಭತ್ತು ರೂಪಾಯಿಗಳ ವೇತನವನ್ನು ನೂರಕ್ಕೆ ಮುಂದಿಟ್ಟಿರುತ್ತದೆ ; ಕೇಂದ್ರ ಸರಕಾರವು ದೊಡ್ಡರೋಲರು ವಿಧಾನದ ಸಮಾಜವಾದವನ್ನು ಇಲ್ಲಿ ಪುರಸ್ಕರಿಸಿರುವುದಲ್ಲ.

ಸಂಬಳಕ್ಕನುಸಾರವಾಗಿಯೂ ಶಟ್ಟೀಭತ್ತೆಯನ್ನೇರಿಸದಿರುವುದು ಕಾಂಗ್ರೆಸ್ಸಿನ ಸಮಾಜದ ವಾದ ಇನ್ನೊಂದು ವೈಶಿಷ್ಟ್ಯಕ್ಕೆ ಹಾಗೂ ವೈಚಿತ್ರ್ಯವಿದೆ ; ಅಂದರೆ ಶುಟ್ಟೀಭತ್ತೆಯನ್ನೇರಿಸುವುದರಲ್ಲಿ ಯಾವ ವಿಧದ ಸಮಾಜವಾದವೂ ಇಲ್ಲ, ಯಾವ ಬಗೆಯ ಪರಿಮಾಣವೂ ಇಲ್ಲ ; ಕ್ರಮಶಃ ಶಟ್ಟೀಭತ್ತೆ ಏರಿರುವುದೂ ಇಲ್ಲ ; ಮಧ್ಯದಲ್ಲಿ ಅದು ತಿರಸ್ಕಾರವಾಗಿ ಬಿಟ್ಟಿದೆ : ಆದಕ್ಕಿಂತಲೂ ಪ್ರಗತಿವಿಧದಲ್ಲಿ ಅದು ಹೆಜ್ಜೆಯನ್ನು ಹಿಂದಕ್ಕಿಟ್ಟಿದೆ ಎನ್ನುವುದೇ ಮೇಲು.

ಈಗ ಘೋಷಿಸಿರುವ ಶುಟ್ಟೀ ಭತ್ಯದ ವಿಚಾರದಲ್ಲಿ ಹೀಗಿದೆ : ರೂ 110 ರಿಂದ 149 ರವರೆಗೆ ಸಂಬಳ ಇರುವವರಿಗೆ ರೂ 16-50 ಜಾಸ್ತಿಯಾಗಿರುತ್ತದೆ : ರೂ 210 ರಿಂದ 399 ರವರೆಗೆ ಸಂಬಳ ಇರುವವರಿಗೆ ರೂ 66 ಜಾಸ್ತಿ ಸಿಗುತ್ತದೆ ; ಆಗ ರೂ 150 ರಿಂದ 209 ರವರೆಗೆ ಸಂಬಳ ಇರುವ ಉದ್ಯೋಗಸ್ಥರಿಗೆ ಎಷ್ಟು ಅಧಿಕ ಶಟ್ಟೀಭತ್ತೆ ಸಿಗಬೇಕು ? ಈಗ ಹೆಚ್ಚಿಸಿರುವುದು ರೂ 12 ! ಇಲ್ಲಿ ಪರಿಮಾಣದ ಪ್ರಶ್ನೆಯೇ ಇಲ್ಲ

ಇದು ಯಾವ ರೀತಿಯ ಸಮಾಜವಾದ ಎನ್ನುವ ಪ್ರಶ್ನೆ ಸಹಜವಾಗಿಯೇ ಇಲ್ಲಿ ಬರುತ್ತದೆ ; ಇದ ಸಮಾಜವಾದ ಅಥವಾದ್ದೆ ಅಥವಾ ಸಮಾಜದ ಪ್ರಶ್ನೆಯೇ ಇರುವುದಿಲ್ಲ : ರಾಜಕೀಯ ಪಕ್ಷಗಳಿಗೆ ಸಮಾಜದ ಪ್ರಶ್ನೆಗಿಂತಲೂ ಸಿಗುವ ಮತಗಳ ಪ್ರಶ್ನೆಯೇ ಮುಖ್ಯವಿರುತ್ತದೆ : ಆ ದೃಷ್ಟಿಯಿಂದ ನೋಡುವಾಗಲೂ ' ಭಾರತೀಯ ಉದ್ಯೋಗಸ್ಥರ ಗುಂಪು ' ಯಾವಾಗಲೂ (ಹೆಚ್ಚಾಗಿ) ಕಾಂಗ್ರೆಸ್ಸಿಗೆ ಅನುಕೂಲವಾಗಿಲ್ಲದೆ ಅಧಿಕ ರಾಷ್ಟ್ರೀಯತಾ ಮನೋಭಾವದಿಂದಿರುವುದೆನ್ನು ತಾಣಬಹುದು ; ಅಂತಹವರನ್ನು ಶಿಕ್ಷಿಸಲು ಇದೊಂದು ಉತ್ತಮ ಸಮಯವೇ ಇದೆ

' ಭಾರತೀಯ ಉದ್ಯೋಗಸ್ಥರ ಶಟ್ಟೀಭತ್ತೆಗೆ ನಲ್ವತ್ತಾರು ರೂಪ್ಯ ಸೇರಿಸಲು ಸರ್ಕಾರಕ್ಕೆ ಇಷ್ಟವಿಲ್ಲದಿದ್ದರೂ ಕನಿಷ್ಠಪಕ್ಷ ರೂ 16-50 ನ್ನಾದರೂ ಸೇರಿಸುವುದು ಸರಿ ಇದೆ

— ಶಿವಶಂಕರ್

ಗೋರಕ್ಷಣ ವ್ಯವಸ್ಥಾಪಕರ ವಿನಂತಿ

ಚಂದಾ ವಾಯಿದೆ ಮುಗಿದಿರುವವರು ದಯವಿಟ್ಟು ಹಣವನ್ನು ಕಳುಹಿಸಿಕೊಡಬೇಕಾಗಿ ವಿನಂತಿ

ಡಾ|| ಪಿ ಎಸ್ ನಾರಾಯಣ್, ಶ್ರೀ ಪಿ ಎಸ್ ವಿಶ್ವನಾಥ್, ಜಯನಗರ, ಬೆಂಗಳೂರು

ಶ್ರೀ ಡಿ ಜಿ ಶಾಸ್ತ್ರಿಗಳು (ದ ರೈಲ್ವೆ) ವಿದ್ಯಾರಣ್ಯಪುರಂ, ಮೈಸೂರು

ಶ್ರೀ ಅನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮ ಪ್ರಚಾರಸಭಾ, ಹೊಂಗನೂರು

ಗೋರಕ್ಷಣ ಆಫೀಸು, ಸತ್ಯವಾದಿ ಪ್ರೆಸ್, ಚಾಮರಾಜಪುರಂ, ಮೈಸೂರು 4



ಗೋರಕ್ಷಣೆ ಪ್ರಾಣಿಪಯೂ ಹಾಗ್ಗಳು ಹೆಚ್ಚೆಚ್ಚಾಗಿ ನಡೆಯಲಿ

ಪುದ್ದಾಂಡ್ ವೈಭವ 6 ನೇ ವಾರ

ಶಿ ಸಾ

ಏಪ್ರಿಲ್ ಫೂಲ್ (ಹಿಂದಿ) April Fool

ಸೈಂಬಾನು, ದಿಶ್ವಜಿತ್ ಅಭಿನಯಿಸಿರುವ, ಸತ್ವಂಶ್ ಪ್ರಸಂಗಗಳು, ನಕ್ಕುನಲಿಸುವ ಹಾಸ ವಿನೋದ, ನೃತ್ಯ, ಸಂಗೀತದಿಂದ ಕೂಡಿದ ಮನೋಲ್ಲಾಸಿಕ ಕಲಾಕೃತಿ.

– ಸುಬೋಧ ಮುಖರ್ಜಿಯವರ ಅವೋಘ ಆನ್ಸ್ವೇರ್ ಕಲರ್ ಚಿತ್ರ –

ಸಂತೋಷ : ಶಂಕರ್ ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಆಪೆರಾ 15-1-65 ರಿಂದ

ಬೊಬಿಲಿ ಯುದ್ಧಮು [ತೆಲುಗು]

ಪಾತ್ರ— ಎ ಟಿ ರಾಮಾರಾವ್, ಭಾನುಮತಿ, ಎಂ ಆರ್ ರಾಧಾ, ಜಮುನಾ ವಿಜಯಲಕ್ಷ್ಮಿ, ರಾಜನಾಲಾ, ಎಸ್ ವಿ ರಂಗಾರಾವ್ [ದಿನ 3 ಆಟಗಳು]

SHAKTI SUDHA

Superb Tonic

ಅಶೋಕಾ ಏಜೆನ್ಸೀಸ್

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಸಮಸ್ತ ಎಲ್ಲ ವಿಧವಾದ ಆಯುರ್ವೇದ ಔಷಧಗಳೂ ದೊರೆಯುತ್ತವೆ.

ಎಲ್ಲ ಖಾಯಿಲೆಗಳಿಗೂ ಚಿಕಿತ್ಸೆ ಮಾಡಲಾಗುತ್ತದೆ

Help The ' Gorakshana '

ಶ್ರೀ ದ್ವಾರಕಾ ಜಗದ್ಗುರು ಮಹಾಸ್ವಾಮಿಗಳವರು, ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ್ಗಳು ಉದಾರ ಅನುಗ್ರಹ ಕೃಪೆಯಾಗಿದೆ.

" ಗೋರಕ್ಷಣ " ಕ್ಕೆ ಚೈತ್ರಬಲಿಗಾಗಿ

ಕನ್ನಡನಾಡಿನಲ್ಲಿ ಗೋರಕ್ಷಣೆ, ಪ್ರಾಣಿದಯೆ, ಶಾಕಾಹಾರ, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಪ್ರಚಾರ ಮಾಸಪತ್ರಿಕೆ.

" ವಾರ್ಷಿಕ ಚಂದಾ 50 ನ್ಯೆಪೆ " ಗೋರಕ್ಷಣ " ಕ್ಕೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

Edited, Printed & Published by the Proprietor
Dharma Prachara Nirata M. S. Krishna Rao
the Satyavadi Press, Chamarajapuram, Mysore 4